

ಕ್ಷಯರೋಗವೆಂಬ ಸಾರ್ವಜನಿಕ ಆರೋಗ್ಯ ಸಮಸ್ಯೆ ನಿರ್ವಹಣೆ, ನಿಯಂತ್ರಣದ ಹಂತಗಳನ್ನು ದಾಟಿ ನಿರ್ಮೂಲನೆಯ ಹಂತವನ್ನು ತಲುಪಿದೆ. ಇದು ಕ್ಷಯರೋಗದ ನಿವಾರಣೆ ಬಗ್ಗೆ ಹಂತ ಹಂತವಾಗಿ ಬದಲಾದ ಮನೋಭಾವ, ಕಾರ್ಯೋಪಾಯಗಳು ಹಾಗೂ ದೃಢ ಸಂಕಲ್ಪವನ್ನು ಸೂಚಿಸುತ್ತದೆ.

ಕ್ಷಯರೋಗದ ಬಗ್ಗೆ ವಿಶ್ವ ಆರೋಗ್ಯ ಸಂಸ್ಥೆಯ ಈ ಬಾರಿಯ ಘೋಷಣೆ: ನಾಯಕರು ಬೇಕಾಗಿದ್ದಾರೆ, ಕ್ಷಯರೋಗಮುಕ್ತ ವಿಶ್ವನಿರ್ಮಾಣಕ್ಕಾಗಿ ಕ್ಷಯರೋಗವನ್ನು ಕೊನೆಗೊಳಿಸಿ ಇತಿಹಾಸ ನಿರ್ಮಿಸಿ ಎಂದು. ಆ ಕಾಣ್ಕೆಯ ಸಾಕಾರಕ್ಕಾಗಿ ದೃಢ ಸಂಕಲ್ಪ ಮತ್ತು ವಿಶ್ವಾಸಗಳಿಂದ ಸಾಗಬೇಕಾಗಿದೆ.

## ಸಕ್ರಿಯರೋಗ ಪತ್ತೆ, ಚಿಕಿತ್ಸಾ ಆಂದೋಲನ:

ಮನೆ ಮನೆ ಭೇಟಿಯ ಮೂಲಕ ಇಡೀ ಸಮುದಾಯವನ್ನು ಸಮಗ್ರವಾಗಿ ಕ್ಷಯರೋಗ ಲಕ್ಷಣಗಳಿಗಾಗಿ ಶೋಧಿಸುವುದು. ಲಕ್ಷಣಗಳಿರುವವರು ಕಂಡು ಬಂದರೆ ರೋಗಪತ್ತೆಗಾಗಿ ಕಫ ಪರಿಕ್ಷೆ ಮಾಡಿಸುವುದು. ರೋಗ ಪತ್ತೆಯಾದಲ್ಲಿ ತಕ್ಷಣವೇ ಚಿಕಿತ್ಸೆ ಪ್ರಾರಂಭಿಸುವುದು ಹಾಗೂ 'ನಿಕ್ಷಯ್'ನಲ್ಲಿ ದಾಖಲಿಸುವುದು. ಇದು ಸಕ್ರಿಯ ಕ್ಷಯರೋಗ ಪತ್ತೆ ಮತ್ತು ಚಿಕಿತ್ಸಾ ಆಂದೋಲನದ ವೈಶಿಷ್ಟ್ಯ.

ರೋಗ ಲಕ್ಷಣಗಳಿರುವವರು ಚಿಕಿತ್ಸೆಗಾಗಿ ಸೇವಾ ಸೌಲಭ್ಯಕ್ಕೆ ಬರುವ ಬದಲು ಸೇವಾವಲಯವೇ ರೋಗ ಲಕ್ಷಣಗಳಿರುವವರನ್ನು ಪತ್ತೆ ಹಚ್ಚಲು ಹಾಗೂ ರೋಗ ಪರಿಕ್ಷೆ ಮಾಡಿ ಶೀಘ್ರದಲ್ಲಿ ಚಿಕಿತ್ಸೆ ಆರಂಭಿಸಲು ಜನಸಮುದಾಯದತ್ತ ಹೋಗುವ ಆಂದೋಲನವಿದು. ಒಟ್ಟಾರೆಯಾಗಿ ಹೇಳುವುದಾದರೆ ಸಾಮಾಜಿಕ, ಆರ್ಥಿಕ ವೃತ್ತೀಯ ಮತ್ತು ವೈದ್ಯಕೀಯ ಸೇವಾ ಸೌಲಭ್ಯಗಳನ್ನು ಪಡೆಯಲಾಗದ ಕಾರಣಗಳಿಗಾಗಿ ಕ್ಷಯರೋಗಕ್ಕೆ ಈಡಾಗಬಹುದಾದ ಸಾಧ್ಯತೆಯಿರುವ ಎಲ್ಲ ಗುಂಪುಗಳನ್ನು ರೋಗಲಕ್ಷಣಗಳಿಗಾಗಿ ತಪಾಸಣೆ ಮಾಡುವುದು ಇದರ ಮುಖ್ಯ ಉದ್ದೇಶ.

ಕೇಂದ್ರ ಕ್ಷಯರೋಗ ವಿಭಾಗದ ನೇತೃತ್ವದಲ್ಲಿ ಪರಿಷ್ಕೃತ ರಾಷ್ಟ್ರೀಯ ಕ್ಷಯರೋಗ ನಿಯಂತ್ರಣ ಕಾರ್ಯಕ್ರಮದ ಮಾರ್ಗಸೂಚಿಗಳಂತೆ ಈ ಆಂದೋಲನವನ್ನು ಕರ್ನಾಟಕದಲ್ಲಿ ಜಾರಿಮಾಡಲಾಗುತ್ತಿದೆ. ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿನ ಕೊಳಚೆ ಪ್ರದೇಶಗಳು, ಆರೋಗ್ಯ ಸೇವಾ ಸೌಲಭ್ಯ ತಲುಪಲಾಗದಂತಹ ಪ್ರದೇಶಗಳು, ನಗರ, ಗ್ರಾಮಾಂತರ ಹಾಗೂ ಬುಡಕಟ್ಟು ಪ್ರದೇಶಗಳಲ್ಲಿನ ಸಮುದಾಯಗಳು, ಗಾರೆ ಕೆಲಸಗಾರರು, ಕಲ್ಲುಪುಡಿಗಟ್ಟುವ ಪ್ರದೇಶಗಳು, ವೃದ್ಧಾಶ್ರಮಗಳು, ಕಟ್ಟಡಕಾರ್ಮಿಕರ ವಸತಿ ಪ್ರದೇಶಗಳಲ್ಲಿನ ವಲಸಿಗರು, ಎಚ್.ಐ.ವಿ.ಗೆ ಅಪಾಯದ ಅಂಚಿನಲ್ಲಿರುವ ಸಮುದಾಯ ಸಂಸ್ಥೆಗಳ ಸದಸ್ಯರು, ಮಾದಕ ವ್ಯಸನಿಗಳು, ನಿರಾಶ್ರಿತರ ವಸತಿಗೃಹಗಳು, ಬಂದೀಖಾನೆಗಳು, ಗಾಳಿ ಬೆಳಕು ಸರಿಯಾಗಿ ಆಡದ ಮನೆಗಳಲ್ಲಿ ವಾಸಮಾಡುವ ಸಮುದಾಯಗಳನ್ನು ಗಮನದಲ್ಲಿಟ್ಟುಕೊಂಡು ಕ್ಷಯರೋಗದ ಲಕ್ಷಣಗಳಿಗಾಗಿ ತಪಾಸಣೆ ಮಾಡುವ ಯೋಜನೆ ಹಾಕಲಾಗಿದೆ.

ಜಿಲ್ಲಾ ಕ್ಷಯರೋಗ ನಿಯಂತ್ರಣಾಧಿಕಾರಿಗಳ ನೇತೃತ್ವದಲ್ಲಿ ಕ್ರಿಯಾ ಯೋಜನೆ, ಮನೆ ಭೇಟಿ, ತಪಾಸಣಾ ವಿಧಾನ, ಐ.ಇ.ಸಿ ಮಾಹಿತಿ ಸಂಪನ್ಮೂಲಗಳ ಬಳಕೆ, ತಪಾಸಣೆ ಮಾಡಲಾಗುತ್ತದೆ. ರೋಗಪತ್ತೆಯನ್ನು ಅಂದೇ ಸಂಜೆ ಸ್ಥಳೀಯ ಕೇಂದ್ರಗಳಿಂದ ನಿಕ್ಷಯ್‌ಗೆ ವರದಿ ಮಾಡಲಾಗುತ್ತದೆ. ಇಂಥದೊಂದು ಬೃಹತ್ ಸಾರ್ವಜನಿಕ ಆರೋಗ್ಯ ಆಂದೋಲನ ನಡೆಸಲು ಬೇಕಾದ ಮಾನವ ಸಂಪನ್ಮೂಲವೂ ದೊಡ್ಡದೇ. ರಾಷ್ಟ್ರೀಯ ಆರೋಗ್ಯ ಅಭಿಯಾನದ 'ಆಶಾ'ಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಂಗನವಾಡಿ ಕಾರ್ಯಕರ್ತೆಯರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಹಿರಿಯ ಮತ್ತು ಕಿರಿಯ ಆರೋಗ್ಯ ಸಹಾಯಕಯರು, ಸ್ವಯಂಸೇವಾ ಸಂಸ್ಥೆಗಳು ಹಾಗೂ ಸಮುದಾಯ ಆರೋಗ್ಯ ಸಂಸ್ಥೆಗಳು ಸದಸ್ಯರು, ಕ್ಷಯರೋಗ ನಿಯಂತ್ರಣ ಕಾರ್ಯಕ್ರಮದ ಕಾರ್ಯಕರ್ತರುಗಳೂ ಆಂದೋಲನದಲ್ಲಿ ಭಾಗವಹಿಸಿತ್ತಾರೆ.

ವ್ಯಾಪಕ ಹಾಗೂ ತೀವ್ರ ಐ.ಇ.ಸಿ. ಕಾರ್ಯಕ್ರಮಗಳು, ಸಮೂಹ ಮಾಧ್ಯಮಗಳಲ್ಲಿ ಪ್ರಚಾರ, ಆಂತರಿಕ ಸಂವಹನ ಮತ್ತು ಸಂಯೋಜನೆಯನ್ನು ಬಲಪಡಿಸಲು ಮತ್ತು ಸಹಕಾರವನ್ನು ಹೆಚ್ಚಿಸಲು ವಾಟ್ಸ್‌ಅಪ್ ಸಮೂಹ ರೂಪಿಸಲಾಗುತ್ತದೆ ಎ.ಸಿ.ಎಫ್. ಆಂದೋಲನದ ಬಗ್ಗೆ ಸಾಮಾಜಿಕ ಮಾಧ್ಯಮಗಳಲ್ಲೂ ಪ್ರಕಟಪಡಿಸಲಾಗುತ್ತದೆ.

### ಘೋಷಣೆಗಳು

- ಎಲ್ಲರೂ ಒಗ್ಗೂಡಿ ಕ್ಷಯರೋಗದ ವಿರುದ್ಧ ಹೋರಟ ನಡೆಸಿ ಕರ್ನಾಟಕವನ್ನು ಕ್ಷಯಮುಕ್ತ ರಾಜ್ಯವನ್ನಾಗಿಸೋಣ.
- ಕ್ಷಯರೋಗಿಗಳಿಗೆ ತೋರಿಸಿ ಆತ್ಮೀಯತೆಯನ್ನು, ಹಂಚಿಕೊಳ್ಳಿ ಅವರೊಂದಿಗೆ ನಿಮ್ಮ ಪ್ರೀತಿಯನ್ನು. ಕ್ಷಯರೋಗವನ್ನು ದೂರವಿರಿಸಿ, ರೋಗಿಯನ್ನಲ್ಲ.
- ಡಾಟ್ಸ್ ಚಿಕಿತ್ಸೆ ಪ್ರಾರಂಭವಾಗುತ್ತಲೇ ಕ್ಷಯರೋಗ ಹರಡುವ ಸಂಭವ ಕಡಿಮೆಯಾಗುತ್ತದೆ. ಪರಸ್ಪರ ಪ್ರೀತಿ ಇರಲಿ, ಕ್ಷಯರೋಗದ ಬಗ್ಗೆ ಎಚ್ಚರಿಕೆ ಇರಲಿ.
- ಯಾವುದೇ ಸ್ಥಿತಿಯಲ್ಲೂ ಡಾಟ್ಸ್ ಕೋರ್ಸ್‌ನ್ನು ಅರ್ಧದಲ್ಲಿ ನಿಲ್ಲಿಸಬೇಡಿ. ಹಾಗೆ ಮಾಡಿದಲ್ಲಿ ಕ್ಷಯರೋಗಕ್ಕೆ ಚಿಕಿತ್ಸೆ ಪಡೆಯುವುದು ಕಷ್ಟವಾಗುತ್ತದೆ.
- ಬುದ್ಧಿವಂತರು ಬಿಡುವುದಿಲ್ಲ ಕೆಲಸವನ್ನು ಅಪೂರ್ಣ, ಡಾಟ್ಸ್ ಕೋರ್ಸ್‌ಗೊಳಿಸಿ ಪೂರ್ಣ.
- ನಾಯಕರು ಬೇಕಾಗಿದ್ದಾರೆ ಕ್ಷಯರೋಗ ಮುಕ್ತ ವಿಶ್ವ ನಿರ್ಮಾಣಕ್ಕೆ – ಕ್ಷಯರೋಗವನ್ನು ನಿರ್ಮೂಲನೆಗೊಳಿಸಿ ಇತಿಹಾಸ ನಿರ್ಮಿಸಿ.